**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 01.06.2026**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ** .

ಕಳೆದ 10-12 ವರ್ಷಗಳಿಂದ ಯಸಳೂರು ಗ್ರಾಮ ಪಂಚಾಯಿತಿಯವರು ನಮ್ಮ ಜೊತೆ ಸಾಲದ ವ್ಯವಹಾರ ಮಾಡುತ್ತಿದ್ದಾರೆ. ಈ ವಿಚಾರವನ್ನು ನಾನು ನನ್ನ ಪ್ರಮಾಣಪತ್ರಿಕೆಯಲ್ಲಿ ಹೇಳಿಲ್ಲ. ಪ್ರತಿವಾದಿಗಳು ಸಾಮ್ರಗ್ರಿಗಳನ್ನು ಸರಬರಾಜು ಮಾಡುವಂತೆ ಕೋರಿ ಸಲ್ಲಿಸಿದ ಮನವಿಯಲ್ಲಿ ಕಾಣಿಸಿದ ವಸ್ತುಗಳನ್ನು ಸರಬರಾಜು ಮಾಡಿದ ಬಗ್ಗೆ ಮತ್ತು ಅದರ ಬೆಲೆಯ ಬಗ್ಗೆ ಬಿಲ್ ನಂಬರನ್ನು ನಮೂದು ಮಾಡಿರುವುದಿಲ್ಲ. ಅದರಲ್ಲಿ ಕಾಣಿಸಿದ ವಸ್ತುಗಳನ್ನು ಯಾರು ತೆಗೆದುಕೊಂಡು ಹೋದರು ಎನ್ನುವ ಬಗ್ಗೆ ಆ ಮನವಿಯಲ್ಲಿ ಕಾಣಿಸಿಲ್ಲ ಎಂದರೆ ಅದರಲ್ಲಿ ಕಾಣಿಸಿಲ್ಲ ಡೆಲಿವರಿ ನೋಟ್ ನಲ್ಲಿ ಕಾಣಿಸಿ ಸಹಿ ಪಡೆದಿದ್ದೇವೆ ಎನ್ನುತ್ತಾರೆ. ನಿಪಿ-5 ರಿಂದ 28ರಲ್ಲಿ ಯಾರು ಸ್ವೀಕರಿಸಿದ್ದಾರೆ ಎನ್ನುವ ಬಗ್ಗೆ ಅವರ ಹುದ್ದೆ ಮತ್ತು ಸೀಲು ಇಲ್ಲ ಎಂದರೆ ಸರಿ. ನಾನು ಗ್ರಾಮ ಪಂಚಾಯಿತಿಗೆ 9,60,718 ರೂಪಾಯಿ ಮೌಲ್ಯದ ಸಾಮ್ರಗ್ರಿಗಳನ್ನು ಸರಬರಾಜು ಮಾಡಿರುತ್ತೇನೆ ಮತ್ತು ಆ ಹಣವನ್ನು ಪ್ರತಿವಾದಿಯರು ನನಗೆ ನೀಡಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 2023ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯವರು ನನಗೆ 14,91,894ರೂಪಾಯಿ ಹಣವನ್ನು ನನ್ನ ಖಾತೆ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅಷ್ಟು ಹಣ ಕೊಟ್ಟಿಲ್ಲ 7ಲಕ್ಷ ಚಿಲ್ಲರೆ ಕೊಟ್ಟಿರುತ್ತಾರೆ ಬಾಕಿ ಹಣಕ್ಕೆ ಕೇಸು ಹಾಕಿರುವುದು ಎನ್ನುತ್ತಾರೆ. ವಾದಪತ್ರದಲ್ಲಾಗಲೀ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ನಾನು 7ಲಕ್ಷ ಚಿಲ್ಲರೆ ಹಣವನ್ನು ಪ್ರತಿವಾದಿಯರು ನೀಡಿದ ಬಗ್ಗೆ ನಾನು ಹೇಳಿಲ್ಲ.

2.ಗ್ರಾಮ ಪಂಚಾಯಿತಿಯಿಂದ ನಮಗೆ ಹಣ ಬರಬೇಕಾಗಿದೆ ಎಂದು ಪ್ರತಿವಾದಿಯರ ಮೇಲಧಿಕಾರಿಗಳಾದ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯತಿಗೆ ನೋಟೀಸು ನೀಡಿಲ್ಲ. ಸಾಕ್ಷಿಯು ಸ್ವಯಂ ಆಗಿ ಗ್ರಾಮಸಭೆಯಲ್ಲಿ ಪಿಡಿಒ ಮತ್ತು ಅಧ್ಯಕ್ಷರು ಹಣ ಪಾವತಿಸುವುದಾಗಿ ಒಪ್ಪಿಕೊಂಡಿದ್ದರು ಎನ್ನುತ್ತಾರೆ. ಯಾವ ವರ್ಷದಲ್ಲಿ ಆ ರೀತಿ ಒಪ್ಪಿಕೊಂಡದ್ದು ಎಂದರೆ ಸಾಕ್ಷಿಯು ಪ್ರತಿವರ್ಷ ನಾವು ಸರಬರಾಜು ಮಾಡಿದ ಸಾಮ್ರಗ್ರಿಗಳ ಹಣವನ್ನು ನೀಡುವಂತೆ ಕೇಳುತ್ತಿದ್ದೆನು, ಆವಾಗ ಕೊಡುವಂತೆ ಒಪ್ಪುತ್ತಿದ್ದರು ಎನ್ನುತ್ತಾರೆ. ದಿನಾಂಕ 9-1-24 ರಂದು ಗ್ರಾಮ ಪಂಚಾಯಿತಿಯಲ್ಲಿ ನಡೆದ

ಸಾಮಾನ್ಯ ಸಭೆಯಲ್ಲಿ ನಮಗೆ 14,91,894ರೂಗಳನ್ನು ಗ್ರಾಮ ಪಂಚಾಯತಿಗೆ ಸರಬರಾಜು ಮಾಡಿದ ಸಾಮಗ್ರಿಗಳ ಬಾಬ್ತು ನೀಡಿದ್ದರೂ ಸಹ ಮತ್ತೆ ಹಣ ಬರಬೇಕೆಂದು ಕೇಳುತ್ತಿರುವುದರಿಂದ ಇವರ ಅಂಗಡಿಯಿಂದ ಯಾವುದೇ ಸಾಮಗ್ರಿಗಳನ್ನು ಇನ್ನು ಮುಂದೆ ಖರೀದಿಸಬಾರದೆಂದು ತೀರ್ಮಾನ ಮಾಡಿ ನಡವಳಿಕೆ ನಡೆಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ಬಿಲ್ಲಿನಲ್ಲಿ ಕಾಣಿಸಿರುವ ಯಾವುದೇ ಸಾಮಗ್ರಿಗಳನ್ನು ನಾನು ಗ್ರಾ,ಪಂ.ಗೆ ಸರಬರಾಜು ವಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಜದ ಅಕ್ರಮ ಫಾಯ್ದೆ ಹೊಂದುವ ಉದ್ದೇಶದಿಂದ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆಸ ರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**